

## ಮುದ ನೀಡಿದ ಹಕ್ಕಿಗಳ ಈಜುಕೊಳ!

ಜೂನ್ 18ರ ಸಂಚಿಕೆಯಲ್ಲಿ ಪ್ರಸಾದ್ ಶೆಣೈ ಆರ್.ಕೆ. ಅವರು ಬರೆದ 'ಹಕ್ಕಿಗಳಿಗೊಂದು ಸ್ವಿಮ್ಮಿಂಗ್ ಪೂಲ್!' ಲೇಖನ ಚೆನ್ನಾಗಿದೆ. ಪಟ್ಟಣಗಳಲ್ಲಿ ಈಜುಕೊಳಗಳಿಗೆ ಶುಲ್ಕ ವಿಧಿಸಿ; ಸಮಯ ನಿಗದಿಪಡಿಸುವ ವ್ಯಾಪಾರೀತನ ಕಾಣಬಹುದು. ಆದರೆ ಲೇಖಕರು ಅಂತಹ ಯಾವುದೇ ಕಟ್ಟುಪಾಡಿಲ್ಲದೆ ಪುಟ್ಟ ಹಕ್ಕಿಗಳಿಗೆ ಸ್ವಚ್ಛಂದ ಈಜುಕೊಳ ವ್ಯವಸ್ಥೆ ಮಾಡಿದ್ದು, ಹೊಸ ಹೊಸ ಅತಿಥಿಗಳನ್ನು ಮನೆ ಅಂಗಳಕ್ಕೆ ದಿನವೂ ಬರುವಂತೆ ಮಾಡಿದ್ದು, ಅನುಕರಣೀಯ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಹೆಚ್ಚು ಕಥೆಗಳು ಪ್ರಕಟವಾಗಲಿ

ಹಲವಾರು ಓದಿಸಿಕೊಂಡು ಹೋಗುವಂಥಾ ಕಥೆಗಳನ್ನು ನೀಡುತ್ತಿದ್ದ ನಮ್ಮ ನೆಚ್ಚಿನ 'ಸುಧಾ' ಸಂಚಿಕೆಯಲ್ಲಿ ಈಗೀಗ ಕಥೆಗಳು ಕಣ್ಮರೆಯಾಗುತ್ತಿವೆ. ಹಿಂದೆಲ್ಲಾ ಮೂರು ಮೂರು ಕಥೆಗಳನ್ನು ಹೊತ್ತು ತರುತ್ತಿದ್ದ ಸುಧಾದಲ್ಲಿ ಈಗ ಹೆಚ್ಚಾಗಿ ಒಂದೇ ಕಥೆ, ಕೆಲವೊಮ್ಮೆ ಒಂದೂ ಇಲ್ಲದೆ ಬಂದ ಹಲವಾರು ನಿದರ್ಶನವಿದೆ. ಇದು ನನ್ನಂತೆ ಹಲವರನ್ನು ನಿರಾಶೆಗೊಳಿಸುತ್ತಿದೆ. ಹಾಗಾಗಿ ಕಡಿಮೆಯೆಂದರೂ ಎರಡು ಕಥೆಗಳನ್ನಾದರೂ ಪ್ರಕಟಿಸಿ.

–ವಾಸುದೇವ ಭಟ್

## ಕೊರೊನಾ ವಿರುದ್ಧ ಕಂಠದಾನ

ಕೊರೊನಾ ವೈರಸ್ ಭಾರತಕ್ಕೆ ಕಾಲಿಟ್ಟ ದಿನದಿಂದ ಜನರಲ್ಲಿ ವೈರಸ್ ಕುರಿತು ಜಾಗೃತಿ ಮೂಡಿಸುವ ಮೊಬೈಲ್ ಫೋನ್ ಸಂದೇಶಕ್ಕೆ ಧ್ವನಿಯಾದ ಮಂಗಳೂರಿನ ಡಾರೆಲ್ ಜೆಸಿಕಾ ಫೆರ್ನಾಂಡಿಸ್, ಮುಳಿಯದ ವಿದ್ಯಾ ನಾರಾಯಣ ಭಟ್, ಸುಳ್ಯದ ಟಿಂಟು ಮೋಲ್ ಜೋಸೆಫ್ ಹಾಗೂ ಈ ಎಲ್ಲಾ ಕಲಾವಿದರ ಮಾರ್ಗದರ್ಶಕ ವಿಟ್ಲದ ಸರವು ಕೃಷ್ಣ ಭಟ್ ಅವರನ್ನು ಪರಿಚಯಿಸಿದ ಎಂ. ಎಸ್. ಶೋಭಿತ್ ಅವರ ಲೇಖನ (ಜೂನ್ 11ರ ಸಂಚಿಕೆ) ಖುಷಿಕೊಟ್ಟಿತು.

–ಪಿ. ಜಯವಂತ ಪೈ, ಕುಂದಾಪುರ

## ಆದಿತ್ಯ ಹೃದಯ



ಜೂನ್ 4ರ ಸಂಚಿಕೆಯಲ್ಲಿ ಪ್ರಕಟವಾದ ಗುರುರಾಜ್ ಎಸ್. ದಾವಣಗೆರೆ ಅವರು ಬರೆದ 'ಆದಿತ್ಯ ಹೃದಯ ಅರಿಯಲೊಬ್ಬ ಆದಿತ್ಯ' ಲೇಖನ ನಮ್ಮ ಹೆಮ್ಮೆಯ ಇಸ್ರೊ ಸಂಸ್ಥೆಯ ಮುಂದಿನ ಯೋಜನೆ ಆದಿತ್ಯ ಎಲ್ 1 ಬಗ್ಗೆ ಬೆಳಕು ಚೆಲ್ಲಿದೆ. VELC ಕಾರ್ಯಕ್ಷಮತೆ ನಮಗೆ ಸೂರ್ಯನ ಬಗೆಗಿನ ಮಾಹಿತಿ ಹೆಚ್ಚಿಸುವಲ್ಲಿ ಸಹಕಾರಿಯಾಗುವುದೆಂಬ ಭರವಸೆಯನ್ನು ನೀಡಿದೆ. ಸೂರ್ಯನ ಅತ್ಯಧಿಕ ಶಾಖ ತಡೆಯುವ VELC ರಚನೆಯ ತಂತ್ರಜ್ಞಾನ ಬೆರಗು ಮೂಡಿಸುತ್ತದೆ. ಇಸ್ರೊ ಸಂಸ್ಥೆಯ ಈ ಯೋಜನೆ ಯಶಸ್ವಿಯಾಗಲೆಂದು ಹಾರೈಸೋಣ. ಹಾಗೆಯೇ ಇಂತಹ ಉಪಯುಕ್ತ ಲೇಖನ ಪ್ರಕಟಿಸಿದ 'ಸುಧಾ'ಗೆ ಧನ್ಯವಾದಗಳು.

–ಡಾ. ನರಸಿಂಹ ಪ್ರಸಾದ್, ಹೊಸಕೋಟೆ

## ವಿಚಾರ ಲಹರಿ

ಜೂನ್ 11ರ ಸಂಚಿಕೆಯ 'ವಿಚಾರಲಹರಿ' ಪುಟದಲ್ಲಿ ಪ್ರಕಟವಾದ 'ದೂರದೃಷ್ಟಿ' ವಿಚಾರ ಮಾಡುವಂಥದ್ದು. ನೀರಾವರಿ, ಕೃಷಿ, ವಿದ್ಯುತ್, ರಸ್ತೆ ಮುಂತಾದ ಪ್ರಮುಖ ಅಭಿವೃದ್ಧಿ ಬಗ್ಗೆ ಮುಂದಾಲೋಚನೆ ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ.

–ಅಂಚೆ ಸುಬ್ರಹ್ಮಣ್ಯ, ಬೆಂಗಳೂರು

## ಜರೀನಾಳೆಂಬ ಬಾಲೆ

ಜೂನ್ 11ರ ಸಂಚಿಕೆಯಲ್ಲಿ ಕಾ. ತ. ಚಿಕ್ಕಣ್ಣನವರ ಕಥೆ 'ಜರೀನಾಳೆಂಬ ಬಾಲೆ', ಪ್ರಸ್ತುತ ಸಂದರ್ಭಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಜರೀನಾಳ ಸಂಕಟ ಜಾಗತಿಕವಾಗಿ ಸಾವಿರಾರು ಬಾಲೆಯರ ಸಂಕಟದ ಪ್ರತಿರೂಪದಂತೆ ಕಂಡುಬರುತ್ತದೆ. ಕೊರೊನಾ ತಂದಿರುವ ಜೀವ ಹಿಂಡುವ ಸ್ಥಿತಿಯನ್ನು ಕಥೆಗಾರರು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಈ ಕಥೆಯು ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದ ಕಥೆಯಾಗಿದೆ.

–ಸಂಜೀವಕುಮಾರ್ ಅತಿವಾಳೆ, ಬೀದರ್

ಕಥೆ ಓದುತ್ತಾ ಹೋದಂತೆ ಕಣ್ಣೀರಾದೆ. ಹೊಟ್ಟೆಯ ಹಸಿವು ಎಲ್ಲರಿಗೂ ಒಂದೇ. ಅದು ಜಾತಿ, ಮತ, ಧರ್ಮ, ಅಂತಸ್ತು ಏನನ್ನೂ ನೋಡುವುದಿಲ್ಲ. ಬಡತನದಲ್ಲೂ ಹೇಗೋ ಸಾಗುತ್ತಿದ್ದ ಬದುಕಿನಲ್ಲಿ ಧುತ್ತೆಂದು ಎದುರಾದ ತಂದೆಯ ಸಾವು, ಮನೆಯ ಶೋಚನೀಯ ಸ್ಥಿತಿ, ಎಂದೂ ಆಚೆ ಬಾರದವಳು ಬರಲೇಬೇಕಾದ ಪರಿಸ್ಥಿತಿ... ಎಲ್ಲಾ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ. ಈ ಕೊರೊನಾದ ಕಾಲದಲ್ಲಿ ಎಷ್ಟೋ ಜೀವಗಳು ಅನುಭವಿಸುತ್ತಿರುವ ನಿಜಸ್ಥಿತಿಯಿದು. ಅಸಹಾಯಕಳಾದ ಜರೀನಾ ದಿನಸಿ ಅಂಗಡಿಯ ಮುಂದೆ ನಿಲ್ಲುವ ದೃಶ್ಯ ಶೋಚನೀಯ.

–ಸುಬ್ಬಲಕ್ಷ್ಮಿ ಎಚ್. ಕೆ., ಕೋಲಾರ

## ಸಹಕಾರಿ ಆಸ್ಪತ್ರೆಗಳು

ಜೂನ್ 11ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಅವರು ಬರೆದಿರುವ 'ಸಹಕಾರಿ ಆಸ್ಪತ್ರೆಗಳು' ಲೇಖನ ಅತ್ಯಂತ ಸಮಗ್ರವಾಗಿ ಮತ್ತು ಸಕಾಲಿಕವಾಗಿ ಮೂಡಿಬಂದಿದೆ. ಸಹಕಾರಿ ಕ್ಷೇತ್ರ, ಸಾಮಾಜಿಕ ನ್ಯಾಯ ಒದಗಿಸಬಲ್ಲ ಕ್ಷೇತ್ರ. ಸಮುದಾಯದ ಒಳಿತನ್ನು ದೃಷ್ಟಿಯಲ್ಲಿಟ್ಟುಕೊಂಡು ಸಹಕಾರಿ ವಲಯ ಕಟ್ಟಿರುವ ಆಸ್ಪತ್ರೆಗಳ ಕುರಿತ ವಿವರಗಳು ಕುತೂಹಲಕಾರಿಯಾಗಿವೆ. ಇಂಥ ಪ್ರಯತ್ನಗಳು ಇನ್ನಷ್ಟು ಹೆಚ್ಚಿದಾಗಲೇ ಸಮಾಜದ ಸ್ವಾಸ್ಥ್ಯ ಸರಿದೂಗಲು ಸಾಧ್ಯ.

–ಶಶಿಧರ ಎಲೆ, ಬೆಂಗಳೂರು

ಸಹಕಾರಿ ಆಸ್ಪತ್ರೆ ಎಂಬ ಅದ್ಭುತವಾದ ವ್ಯವಸ್ಥೆಯ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದೀರಿ. ಅದು ಅತ್ಯಂತ ಪ್ರಶಂಸನೀಯ. ಆದರೆ ಸಹಕಾರಿ ಆಸ್ಪತ್ರೆ ಹೇಗೆ ಸ್ಥಾಪನೆ ಆಗುತ್ತದೆ, ಅದಕ್ಕೆ ಹಣವನ್ನು ಹೇಗೆ ಸಂಗ್ರಹಣೆ ಮಾಡಲಾಗುತ್ತದೆ, ಕಡಿಮೆ ಬೆಲೆಯಲ್ಲಿ ಚಿಕಿತ್ಸೆ ನೀಡಿಯೂ ವೈದ್ಯರನ್ನು ಸಂಬಳ ನೀಡಿ ಹೇಗೆ ಉಳಿಸಿಕೊಳ್ಳಲಾಗುತ್ತದೆ, ಅಂತಹ ಆಸ್ಪತ್ರೆಗಳನ್ನು ಹಾದಿ ತಪ್ಪದ ಹಾಗೆ ನಿಯಂತ್ರಿಸುವವರಾರು, ಇದರ ಬಗ್ಗೆ ಕಾನೂನು ಏನು ಹೇಳುತ್ತದೆ... ಹೀಗೆ ಸಹಕಾರಿ ಆಸ್ಪತ್ರೆ ಕಾರ್ಯನಿರ್ವಹಿಸುವ ವಿಧಿ ವಿಧಾನದ (ಜನರಲ್ ಮಾಡೆಲ್) ಬಗ್ಗೆ ಒಂದು ಟಿಪ್ಪಣಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆಯೇ ಅವು ಅನುಭವಿಸುತ್ತಿರುವ ಸಮಸ್ಯೆಗಳು, ಸಂಭವನೀಯ ಪರಿಹಾರ, ಕರ್ನಾಟಕದಲ್ಲಿ ಏಕೆ ಇದು ಬೆಳೆಯಲಿಲ್ಲ ಎಂಬುದರ ಬಗ್ಗೆ ಬೆಳಕು ಚೆಲ್ಲಬಹುದಿತ್ತು.

–ರಾಕೇಶ್, ಬೆಂಗಳೂರು

## ಮುದ ನೀಡಿದ ಮಕ್ಕಳ ಕವಿತೆಗಳು

ಜೂನ್ 11ರ ಸಂಚಿಕೆಯ ಎಳೆಯರ ಅಂಗಳದಲ್ಲಿ ಮೂಡಿ ಬಂದ ಎಸ್.ವಿ. ಶರ್ಮಾರವರ ಮಕ್ಕಳ ಕವಿತೆಗಳು ಮನಕ್ಕೆ ಮುದ ನೀಡುವುದರ ಜೊತೆಗೆ, ಮಕ್ಕಳ ಜ್ಞಾನ ವೃದ್ಧಿಗೂ ಸಹಕಾರಿಯಾಗಿವೆ. ನಾನು ಕೂಡ ಕವಿತೆಗಳನ್ನು ರಾಗವಾಗಿ ಹಾಡಿ ಖುಷಿಪಟ್ಟೆ.

–ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

## ಹೊಸ ಜೋಕ್ ಪ್ರಕಟಿಸಿ

ಜೂನ್ 11ರ ಸಂಚಿಕೆಯಲ್ಲಿ 'ನಕ್ಕುಬಿಡಿ' ಪುಟದಲ್ಲಿ ಪ್ರಕಟವಾದ ಹನುಮಂತ ಭಟ್ ಅವರ ನಗೆಹನಿಗಳು ಫೇಸ್‌ಬುಕ್ ಮತ್ತು ವಾಟ್ಸ್ ಆ್ಯಪ್‌ನಲ್ಲಿ ಹತ್ತಾರು ಬಾರಿ ಹರಿದಾಡಿದವೇ ಆಗಿವೆ. ಆದಷ್ಟೂ ಹೊಸ ಜೋಕ್‌ಗಳನ್ನು ಪ್ರಕಟಿಸಿ.

–ವಿಜಯಲಕ್ಷ್ಮಿ. ಯು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in